ಜನರಿಗೆ ಹಿಂದೆ ಕೊಟ್ಟಿದ್ದಾರೋ, ಅಲ್ಲಿ ಬೇಗನೆ ಒಂದು ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡುವುದಕ್ಕೆ ಪರಿಶೀಲನೆ ಮಾಡಿ ಇದಕ್ಕೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ವೈ.ಕೆ. ರಾಮಯ್ಯ:– ಮುಖ್ಯಮಂತ್ರಿಗಳು ಈ ವರ್ಷ ಕೊಡುತ್ತೇವೆಂದು ಈ ಸದನದಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದರು. ಕಳೆದ ಸುಮಾರು ಒಂದು ತಿಂಗಳ ಹಿಂದೆ ಸದನ ಸೇರಿದ್ದಾಗ ಈ ವರ್ಷ ಹಳ್ಳಿಗಳಿಗೆ ಆಸ್ಪತ್ರೆಯನ್ನು ಮಂಜೂರು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ. ತಾವು ಹೊಸದಾಗಿ ಆರೋಗ್ಯ ಇಲಾಖೆಯ ಬಗ್ಗೆ ಮಾತನಾಡುತ್ತಿದ್ದೀರಿ. ಆಶ್ವಾಸನೆಗಳು ತಮ್ಮ ಗಮನಕ್ಕೆ ಬಂದಿದೇಯೋ ಬಂದಿದ್ದರೆ ಮಾನ್ಯ ಮುಖ್ಯಮಂತ್ರಿಗಳು ಕೊಟ್ಟಿರುವಂಥ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಆಶ್ವಾಸನೆಯನ್ನು ಕೊಡುತ್ತಿರಾ ?

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಆ ಆಶ್ವಾಸನೆಗಳು ನನ್ನ ಗಮನಕ್ಕೆ ಬಂದಿಲ್ಲ. ಇದನ್ನು ನಾನು ಮುಖ್ಯಮಂತ್ರಿಗಳಿಗೆ ಹೇಳಿ ಆದಷ್ಟು ಬೇಗ ನಾವು ಆರೋಗ್ಯ ಕೇಂದ್ರವನ್ನು ಸ್ಥಾಪನೆ ಮಾಡುತ್ತೇವೆ.

ಅಧ್ಯಕ್ಷರು:– ಲಕ್ಕಣ್ಣನವರ 161ಪ್ರಶ್ನೆಗೆ ಉತ್ತರ ಬಂದಿಲ್ಲದೆ ಇರುವುದರಿಂದ ತಡೆ ಹಿಡಿಯಲಾಗಿದೆ.

ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗಲು ಸರ್ಕಾರ ಕೈಗೊಂಡ ಕ್ರಮ

29 (511) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು;

ಆ) ಈಗ ಇರುವ ಎಷ್ಟು ಜನ ಮಂತ್ರಿಗಳು ಮಿತ ಸಂತಾನ ಅನುಸರಿಸುವರು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗಲು ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಈ ಕೆಳಕಂಡ ಅಂಶಗಳ ಮೇಲೆ ಸಾಮೂಹಿಕ ಶಿಕ್ಷಣ ಮಾಧ್ಯಮದ ಮೂಲಕ ಶಿಕ್ಷಣವನ್ನು ನೀಡಲಾಗುತ್ತಿದೆ.

ಅ) ಸಣ್ಣ ಕುಟುಂಬ ತತ್ವ:
ಆ) ತಡವಾಗಿ ವಿವಾಹವಾಗುವುದರ ಉಪಯೋಗ
ಇ) ಅಂತರದ ಹೆರಿಗೆಯಿಂದ ತಾಯಿ ಮತ್ತು ಮಗುವಿನ ಆರೋಗ್ಯ ಸುಧಾರಣೆ.
ಈ) ಮಗು ಮತ್ತು ತಾಯಿ ಉಳಿಯುವಿಕೆ ಮತ್ತು ಆರೋಗ್ಯ.
ಉ) ಆರು ಮಾರಕ ರೋಗಗಳ ವಿರುದ್ಧ ಲಸಿಕೆಗಳನ್ನು ನೀಡುವುದು.

2. ಕುಟುಂಬ ಕಲ್ಯಾಣ ಮತ್ತು ಲಸಿಕೆ ನೀಡುವ ಸೇವೆಯನ್ನು 176ಆಸ್ಪತ್ರೆಗಳು, 1262ಪ್ರಾಥಮಿಕ ಆರೋಗ್ಯ ಕೇಂದ್ರಗಳು, 623ಆರೆ ಪ್ರಾಥಮಿಕ ಆರೋಗ್ಯ ಘಟಕಗಳು ಹಾಗೂ 7793ಉಪಕೇಂದ್ರಗಳ ಮೂಲಕ ಒದಗಿಸಲಾಗುತ್ತಿದೆ.

3. ಸಂತಾನಹರಣ ಶಸ್ತ್ರ ಚಿಕಿತ್ಸೆ ನಡೆಸಲು ಖಾಸಗಿ ನರ್ಸಿಂಗ್ ಹೋಂಗಳಿಗೆ ಮಾನ್ಯತೆ ನೀಡಲಾಗುತ್ತಿದೆ.

4. ಸಂತಾನಹರಣ ಶಸ್ತ್ರ ಚಿಕಿತ್ಸೆ ನಡೆಸಲು ವೈದ್ಯರಿಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ.

5. ಗ್ರಾಮಾಂತರ ಪ್ರದೇಶದಲ್ಲಿ ಸೋಂಕು ಇಲ್ಲದ ಹೆರಿಗೆ ನಿರ್ವಹಿಸಲು ದಾದಿಯರಿಗೆ ತರಬೇತಿ ನೀಡಲಾಗುತ್ತಿದೆ.

6. ಕಿರಿಯ ಮತ್ತು ಹಿರಿಯ ಮಹಿಳಾ ಆರೋಗ್ಯ ಸಹಾಯಕಿಯರಿಗೆ ವಂಕಿ ಅಳವಡಿಸುವಲ್ಲಿ ಸೂಕ್ತ ತರಬೇತಿ ನೀಡಲಾಗುತ್ತಿದೆ.

7. ಕುಟುಂಬ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸ್ವಯಂಸೇವಾ ಸಂಸ್ಥೆಯನ್ನು ಬಳಸಿಕೊಳ್ಳಲಾಗುತ್ತಿದೆ.

8. ರಾಜ್ಯ ಸರ್ಕಾರದ ಇತರೆ ಇಲಾಖೆಗಳ ಸಹಕಾರ ಪಡೆಯಲಾಗುತ್ತಿದೆ.

9. ಪ್ರತಿ ಜಿಲ್ಲೆಗೆ ಒಂದು ತಿಂಗಳಿಗೆ 15,000 ರೂ.ಗಳ ಲಾಟರಿ ಬಹುಮಾನ ಯೋಜನೆ ವ್ಯವಸ್ಥೆ ಮಾಡಲಾಗಿದೆ.

10. ಸರ್ಕಾರಿ ನೌಕರರಿಗೆ ವಿಶೇಷ ಇಂಕ್ರಿಮೆಂಟ್ ಕೊಡಲಾಗುತ್ತಿದೆ.

11. ಸರ್ಕಾರಿ ನೌಕರರಿಗೆ ವಿಶೇಷ ರಜೆ ಸೌಲಭ್ಯ ನೀಡಲಾಗುತ್ತಿದೆ.

12. ಸಂತಾನಹರಣ ಶಸ್ತ್ರ ಚಿಕಿತ್ಸೆಗೆ ಒಳಪಡುವ ದಂಪತಿಗಳಿಗೆ ಹಸಿರು ಪತ್ರ ವಿತರಣೆ ಮಾಡಲಾಗುತ್ತಿದೆ.

13. ವಂಕಿ ಅಳವಡಿಸಿಕೊಂಡವರಿಗೆ ಹಾಗೂ ಸಂತಾನ ವಿರೋಧ ಚಿಕಿತ್ಸೆ ಮಾಡಿಸಿಕೊಂಡವರಿಗೆ ಪರಿಹಾರಧನ ಕೊಡಲಾಗುತ್ತಿದೆ.

ಆ) ಸರ್ಕಾರದಲ್ಲಿ ಮಾಹಿತಿ ಲಭ್ಯವಿಲ್ಲ.

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ನಾನು ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗಲು ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳು ಏನು ಎಂದು ಕೇಳಿದ್ದೆ. ಮತ್ತೊಂದು ಈಗ ಇರುವ ಸಚಿವ ಸಂಪುಟದಲ್ಲಿ ಎಷ್ಟು ಜನ ಸಚಿವರು ಮಿತ ಸಂತಾನ ನೀತಿಯನ್ನು ಅನುಸರಿಸಿದ್ದಾರೆ, ಎಂದು ಕೇಳಿದ್ದೆ ಅದಕ್ಕೆ ನಮಗೆ ಮಾಹಿತಿ ಲಭ್ಯವಿಲ್ಲ ಎಂದು ಹೇಳಿದ್ದಾರೆ. ಸರ್ಕಾರಕ್ಕೆ ಈಗ ಇರತಕ್ಕಂಥ 40–42 ಜನ ಮಂತ್ರಿಗಳ ಸಂಖ್ಯೆ ಲಭ್ಯವಿಲ್ಲವೆಂದರೆ ಈ ರಾಜ್ಯದ ಬಗ್ಗೆ ಏನು ಲಭ್ಯವಿದೆ. ಆದುದರಿಂದ ದಯಮಾಡಿ ಕೂಡಲೇ ಈ ಬಗ್ಗೆ ಯಾವಾಗ ಮಾಹಿತಿ ಲಭ್ಯವಾಗುತ್ತದೆ. ಈ ಕುಟುಂಬ ಕಲ್ಯಾಣ ಯೋಜನೆಯ ಅನ್ವಯ ಮಿತ ಸಂತಾನವನ್ನು ಜಾರಿಗೆ ತರುವಲ್ಲಿ ಸಚಿವ ಸಂಪುಟದ ಮಂತ್ರಿಗಳು ಈ ಕಾನೂನನ್ನು ಕಾಯಿದೆಯನ್ನು ಒಪ್ಪಿದ್ದಾರೆಯೇ, ಎನ್ನುವುದನ್ನು ದಯಮಾಡಿ ತಾವು ಕೊಡಬೇಕು.

ಶ್ರೀ ಎಂ.ವಿ.ವೆಂಕಟಪ್ಪ:– ಯಾವ ಯಾವ ಎಂ.ಎಲ್.ಎ.ಗಳಿಗೆ ಎಷ್ಟೆಷ್ಟು ಮಕ್ಕಳು ಎಂದು 'Who is Who' ಪುಸ್ತಕದಲ್ಲಿ ಮಾಹಿತಿ ಇರುತ್ತದೆ.

ಶ್ರೀ ಬ್ಲೇಸಿಯಸ್ ಎಂ. ಡಿಸೌಜ:– ಸನ್ಮಾನ್ಯ ಅಧ್ಯಕ್ಷರೇ, ಇವೊತ್ತು ಸಾಯಂಕಾಲದ ಒಳಗೆ ಒದಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್:– ಸಾಯಂಕಾಲ ಪ್ರಶ್ನೆ ಕೇಳಬಹುದೇ ?

ಅಧ್ಯಕ್ಷರು:– ತಮ್ಮ ಪ್ರಶ್ನೆಗೆ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಅಧ್ಯಕ್ಷರೇ, ಹೆಲ್ತ್ ಓವರ್ ಪ್ರಶ್ನೆ ಲಾಸ್ಟ್ ಟೈಮ್ ಕೇಳಿದ್ದೆ 91–92, 92–93ನೇ ಸಾಲಿನಲ್ಲಿ ರಾಜ್ಯದ ಖಾಸಗೀ ಮೆಡಿಕಲ್ ಕಾಲೇಜ್‌ಗಳಲ್ಲಿ ಪ್ರವೇಶ ಎಷ್ಟು ಮಾಡಿದ್ದಾರೆ ? ಹೆಚ್ಚು ಮಾಡಿದ್ದಾರೋ ? ಹೆಚ್ಚು ಮಾಡಿದ್ದರೆ ಅವರಿಗೆ ಎಕ್ಸಾಮಿನೇಷನ್‌ಗೆ ಅಲೋ ಮಾಡಿದ್ದಾರೆಯೇ, ಅದಕ್ಕೆ ಉತ್ತರ ಏಕೆ. ಸ್ವಾಮಿ ಬಂದಿಲ್ಲ. ಅಧ್ಯಕ್ಷರೇ, ಇದನ್ನು ಇವರು ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಾನು ಸರ್ಕಾರದ ಮೇಲೆ ಆಪಾದನೆ ಮಾಡುತ್ತಿದ್ದೇನೆ. ಮಾನ್ಯ ಅಧ್ಯಕ್ಷರೇ ಇವರು ಏನು ಮಾಡುತ್ತಿದ್ದಾರೆ ಎಂದರೆ ಇಲ್‌ಲೀಗಲ್ ಆಗಿ ಯೂನಿವರ್ಸಿಟಿ ಮತ್ತು ಇಂಡಿಯನ್ ಮೆಡಿಕಲ್ ಕೌನ್ಸಿಲ್ ವಿರುದ್ಧವಾಗಿ ಅವರನ್ನು ಅಡ್ಮಿಟ್ ಮಾಡಿದ್ದಾರೆ ಚೀಫ್ ಮಿನಿಸ್ಟರ್, ವೈಸ್ ಚಾನ್ಸಿಲರ್‌ಗೆ ಫೋನ್ ಮಾಡಿ ಪರೀಕ್ಷೆಯ ಹಿಂದಿನ ದಿನ ಅವರನ್ನು ಅಲೋ ಮಾಡಿ ಎಂದು ಹೇಳಿದ್ದಾರೆ ಇದನ್ನು ಮುಚ್ಚಿಡಲಿಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಎರಡು ವಾರ ಅಸೆಂಬ್ಲಿಯಿದೆ ಎಂದು ಹೇಳಿ ಆಮೇಲೆ ರ್ಯಾಟಿಫೈ ಮಾಡುತ್ತೀರಾ. ಇದಕ್ಕೆ ಏಕೆ ಇನ್ನು ಉತ್ತರ ಬರಬೇಕು.

ಅಧ್ಯಕ್ಷರು:– ಅದಷ್ಟು ಬೇಗ ಆ ಉತ್ತರ ತರಿಸಿಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:– ಅಧ್ಯಕ್ಷರೇ, ತಾವು ನಮ್ಮ ಪ್ರೊಟೆಕ್ಷನ್‌ಗೆ ಬರಬೇಕು. ನಾವು ಇಲ್ಲಿರತಕ್ಕಂಥದ್ದು ಸರ್ಕಾರ ಮಾಡತಕ್ಕ ತಪ್ಪುಗಳನ್ನು ಹೇಳುವುದಕ್ಕೆ. ಈ ಸರ್ಕಾರ ತಪ್ಪು ಮಾಡುತ್ತಿದೆ ಎಂದು ಜನರಿಗೆ ಹೇಳಬೇಕಾಗುತ್ತದೆ. ವಿರೋಧಪಕ್ಷದಲ್ಲಿ ನಾವು ಕುಳಿತುಕೊಂಡು ಇವರು ಹೇಳಿದ್ದೆಲ್ಲಾ ಕೇಳಿಕೊಂಡು ಹೋಗುವುದಕ್ಕಲ್ಲ ಸರ್ಕಾರ ಮಾಡತಕ್ಕಂಥ ತಪ್ಪುಗಳನ್ನು ಹೇಳುವುದು ನಮ್ಮ ಕೆಲಸ. ಆದ್ದರಿಂದ ಇವರು ಉತ್ತರಕೊಡುತ್ತಾರೆಂದು ಕಾದುಕೊಂಡಿರಬೇಕೇ ? ಹೆಲ್ತ್ ಓವರ್ ಪ್ರಶ್ನೆಗೆ ಉತ್ತರ ಇಲ್ಲ ಎಂದರೆ ಎಂತಹ ಇರ್‌ರೆಸ್ಪಾನ್ಸಿಬಲ್ ಗೌರ್ನಮೆಂಟ್ ಇದು. ತಾವು ಮುಂದಿನ ವಾರ ಕೊಡುತ್ತೇರೆಂದು ಅಶ್ಯೂರೆನ್ಸ್ ಕೊಡಿ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರನಹಳ್ಳಿ ರಾಮಸ್ವಾಮಿ:– ಮಾನ್ಯ ಅಧ್ಯಕ್ಷರೇ ತಾರೀಖು 24.2.93ರ ಲಿಖಿತದ ಮೂಲಕ ಉತ್ತರಿಸುವ 6ನೇ ಪಟ್ಟಿಯಲ್ಲಿರುವ 53 ಪ್ರಶ್ನೆಗಳ ಪೈಕಿ ಪ್ರಶ್ನೆ ಸಂಖ್ಯೆ 834, 1018, 1028, 1054, 496, 327, 707, 862, 938, 939, 719, 7 ಮತ್ತು 855 ಪ್ರಶ್ನೆಯನ್ನು ಹೊರತು ಪಡಿಸಿ, ಇನ್ನುಳಿದ 40 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಬುಕ್ಕಾಪಟ್ಟಣದಲ್ಲಿರುವ ಶ್ರೀ ಗಜಾನನ ರೂರಲ್ ಹೈಸ್ಕೂಲು ಸರ್ಕಾರದ ವಶ

274 (710) ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):-

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುಮಕೂರು ಜಿಲ್ಲೆ ಶಿರಾ ತಾಲ್ಲೂಕ್ ಬುಕ್ಕಾಪಟ್ಟಣದಲ್ಲಿ ಖಾಸಗಿ ಸಂಸ್ಥೆಯಾದ ಶ್ರೀ ಗಜಾನನ ರೂರಲ್ ಹೈಸ್ಕೂಲ್‌ನ್ನು ಸರ್ಕಾರಕ್ಕೆ ವಹಿಸಿಕೊಳ್ಳಲು ಕ್ಷೇತ್ರದ ಶಾಸಕರು ಸಾರ್ವಜನಿಕರು ಹಾಗೂ ಸಂಸ್ಥೆಯ ಆಡಳಿತ ಮಂಡಳಿಯಿಂದ ಮನವಿಗಳು ಬಂದಿರುವುದು ನಿಜವೆ;

ಆ) ಹಾಗಿದ್ದಲ್ಲಿ, ಸರ್ಕಾರ ಆಡಳಿತ ಮತ್ತು ಶಿಕ್ಷಣದ ದೃಷ್ಟಿಯಿಂದ ಅದನ್ನು ವಹಿಸಿಕೊಳ್ಳಲು ಕ್ರಮ ಕೈಗೊಳ್ಳುವುದೇ ?

ಡಾ।। ಹೆಗ್ಗಪ್ಪ ಡಿ. ಲಮಾಣಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು):–